ಮನೆ ಮಾಡಿಕೊಳ್ಳಬೇಕು. ಅಪ್ಪ, ಅಮ್ಮ ಇಬ್ಬರೂ ಹೋದಮೇಲೆ ಮನೆಯಲ್ಲಿ ಇರೋದು ಕಷ್ಟವಾದರೆ ಪೀಜಿನಲ್ಲಿದ್ದರೂ ನಡೆಯುತ್ತೆ ಅನ್ನಿಸಿತು. ಆರೇ ತಿಂಗಳಲ್ಲಿ ಒಳ್ಳೆಯ ಕೆಲಸವೂ ಸಿಕ್ಕಿತು. ಅವಳ ಸಹಾಯಕ್ಕೆ ಬಂದದ್ದು ಅವಳ ಇಂಗ್ಲಿಷ್ ಎಂಎ ಪದವಿ. ವರ್ಷಕ್ಕೆ ಹದಿನೆಂಟು ಲಕ್ಷ ಸಂಬಳ! ಆಫೀಸಿಗೆ ಹೋಗಿ ಬರಲು ಕಂಪೆನಿಯ ಕ್ಯಾಬ್ ಬರುತ್ತೆ. ಇಷ್ಟು ಸಾಕು, ಇನ್ನೊಂದು ಮದುವೆ ಮಾಡಿಕೊಂಡು ಅವನ ಜತೆ ನಾಜೂಕಾಗಿ ತಂತಿಯ ಮೇಲೆ ನಡೆಯೋ ಹಾಗೆ ಇರೋ ಬದಲು ಹೀಗೇ ಇದ್ದು ಬಿಡಬೇಕು ಅಂತ ನಿರ್ಧರಿಸಿದ್ದಳು.

ಬಾಸ್‌ನ ಮಾತು, ವರ್ತನೆ ಸಹ ಎಂದೂ ಅಸಹ್ಯ ಅನ್ನಿಸಿರಲಿಲ್ಲ ಅಶ್ವಿನಿಗೆ. 'ಮುಂಬೈಗೆ ನನ್ನ ಜತೆ ಬನ್ನಿ ಒಂದು ನೈಟ್ ಸ್ಟೇ ಮಾಡಿ ಬರೋಣ' ಅಂತ ಅವನು ಕರೆಯೋವರೆಗೆ.

ಶರತ್, ಐಎಎಸ್ ಮಾಡಿದ್ದನಂತೆ. ಯಾವುದೋ ಜಿಲ್ಲೆಯಲ್ಲಿ ಡೀಸಿ ಆಗಿದ್ದನಂತೆ. 'ಡೀಸಿಯೊ ಮತ್ತೊಂದೊ ಆಗಿ ಆಗಾಗ ಗಂಟು, ಮೂಟೆ ಕಟ್ಟಿಕೊಂಡು ಊರೂರು ಅಲೆಯುವ ಜಂಜಾಟ ಬೇಡ ಅನ್ನಿಸ್ತು, ರಾಜೀನಾಮೆ ಕೊಟ್ಟೆ' ಅಂತ ಕೆಲಸಕ್ಕೆ ಸೇರಿದ ಹೊಸದರಲ್ಲಿ ಹೇಳಿದ್ದ. ಈಗ ಅವನ ಸಂಬಳ, ಪರ್ಕ್ಸ್ ಎಲ್ಲಾ ಸೇರಿ ವರ್ಷಕ್ಕೆ ಎಪ್ಪತ್ತೈದು ಲಕ್ಷವಂತೆ! ಅಷ್ಟು ದುಡ್ಡು ತಗಂಡು ಏನು ಮಾಡ್ತಾನೋ ಮಾರಾಯ ಅನ್ನಿಸಿತ್ತು. ಮುಂಬೈಗೆ ಬರ್ತೀಯಾ ಅಂತ ಕರೆದ ಮೇಲೆ, ಸಂಬಳದ ದುಡ್ಡನ್ನೆಲ್ಲ ಸಿಕ್ಕ ಸಿಕ್ಕ ಹೆಂಗಸರ ಜತೆ ಮಲಗೋಕೆ ಖರ್ಚು ಮಾಡ್ತಿದ್ದಾನೆ ಅನ್ನಿಸಿ ಅಸಹ್ಯ ಪಟ್ಟುಕೊಂಡಿದ್ದಳು.

ಒಂದಿನ ಕಂಪನಿ ಕ್ಯಾಬ್ ಬರಲಿಲ್ಲ. ಟ್ಯಾಕ್ಸಿಯಲ್ಲಿ ಮನೆಗೆ ಹೋಗಬೇಕು ಅಂದುಕೊಳ್ತಿರುವಾಗ ಅವನೇ, 'ಬನ್ನಿ ನಾನು ಡ್ರಾಪ್ ಮಾಡ್ತೀನಿ' ಅಂತ ಕರೆದ. 'ಆರ್.ಕೆ. ಹಿಲ್ಸ್ ಎಂಟರೆನ್ಸ್ ಹತ್ತಿರ ಇಳೀತೀನಿ' ಅಂತ ಹೇಳಿ ಕಾರು ಹತ್ತಿದಳು. ದಾರಿಯಲ್ಲಿ, 'ಮುಂಬೈಗೆ ಬನ್ನಿ ಅಂತ ಕರೆದಿದ್ದಕ್ಕೆ ಸಾರಿ' ಅಂದ. 'ನೀವು ಒಂಟಿಯಾಗಿದ್ದೀರಿ, ನನ್ನ ಜತೆ ಬರಬಹುದು ಅನ್ನಿಸ್ತು, ಕರೆದೆ. ಪರಸ್ಪರ ಇಷ್ಟಪಡೋ ಹೆಣ್ಣು, ಗಂಡು ಲಿವಿಂಗ್ ರಿಲೇಷನ್ ಹೆಸರಿನಲ್ಲಿ ಒಟ್ಟಿಗೆ ಇರೋ ಕಾಲ ಇದು. ನಾನು ಈ ಕಾಲದವನು' ಅಂದ. ಸ್ವಲ್ಪ ಹೊತ್ತು ಬಿಟ್ಟು,



'ನಿಮಗೆ ಹರ್ಟ್ ಮಾಡಿದೆ, ಸಾರಿ' ಅಂದು ಸುಮ್ಮನೆ ಕಾರು ಓಡಿಸಿದ. ಈ ಕಾಲದವನು ಅಂತ ಹೇಳ್ತಾನಷ್ಟೇ, ಮನಸ್ಸಿನಲ್ಲಿರೋದು ಬರೀ ಲಸ್ಟ್.

ಸ್ವಲ್ಪ ಹೊತ್ತುಬಿಟ್ಟು, 'ನನ್ನ ಹೆಂಡ್ತಿ ಡಿವೋರ್ಸ್ ಕೇಳ್ತಿದ್ದಾಳೆ' ಅಂದ. 'ಈಗವಳು ನನ್ನ ಜತೆ ಇಲ್ಲ. ಅವಳಪ್ಪನ ಮನೆಯಲ್ಲಿ ಇದ್ದಾಳೆ. ಅವಳಪ್ಪ ಮಂತ್ರಿಯಾಗಿದ್ದರು. ಈಗ ರಾಜ್ಯಸಭೆಯ ಮೆಂಬರ್. ನನ್ನ ಹೆಂಡ್ತಿ ಶ್ರೀಮಂತಿಕೆಯಲ್ಲಿ ಬೆಳೆದವಳು. ಶಾಪಿಂಗ್ ಮಾಡೋಕೆ ವಿದೇಶಗಳಿಗೆ ಹೋಗಬೇಕು. ಮನೆಗೆ ಬಂದವರ ಎದುರು ದುಡ್ಡು, ಬಟ್ಟೆ, ಒಡವೆ ಪ್ರದರ್ಶನ ಮಾಡಬೇಕು ಅನ್ನೋ ಮನಸ್ಥಿತಿಯ ಹೆಂಗಸು. ಅದು ನಂಗೆ ಇಷ್ಟವಿಲ್ಲ ಅಂದೆ. ಅಷ್ಟಕ್ಕೇ ಮನೆ ಬಿಟ್ಟು ಹೋದಳು. ನಾನು ಐಎಎಸ್ ಅನ್ನೋ ಕಾರಣಕ್ಕೆ